ನಿಗಮವೇ ಸ್ಥಾಪಿಸುತಲಿದ್ದು. ಈ ಯೋಜನೆಯ ಟೈಲ್‌ಟೇಸ್ ಕಾಲುವೆಯ ಕೆಲಸಗಳನ್ನು ಈಗಾಗಲೇ ಕೈಗೆತ್ತಿಕ್ಕೊಳ್ಳಲಾಗಿದೆ.

ಚುಂಚನಕಟ್ಟೆ ಕಿರು ಜಲವಿದ್ಯುತ್ ಯೋಜನೆಯ ಕೆಲಸಗಳು ಈಗಾಗಲೇ ಪ್ರಾರಂಭವಾಗಿದ್ದು ಪ್ರಗತಿಯು ವಿವಿಧ ಹಂತದಲ್ಲಿದೆ.

ಶಿವನಸಮುದ್ರ ಕಾಲೀಕ ಜಲವಿದ್ಯುತ್ ಯೋಜನೆಯು ಕಾವೇರಿ ಕೊಳ್ಳದಲ್ಲಿದ್ದು ತಮಿಳುನಾಡು ನೊಂದಗಿನ ಕಾವೇರಿ ಜಲವಿವಾದದಲ್ಲಿ ಸೇರಿಕೊಂಡಿರುತ್ತದೆ.

೫) ಕಬಿನಿ ಆಣೇಕಟ್ಟು, ಕಬಿನಿ ಬಲದಂಡೆ, ನುಗ್ಗು, ದೇವರಾಜ ಅರಸ್ ಕಾಲುವೆ ಮುಂತಾದ ಕಿರು ಜಲವಿದ್ಯುತ್ ಯೋಜನೆಗಳನ್ನು ಖಾಸಗೀ ಸಂಸ್ಥೆಗಳಿಗೆ ವಹಿಸಿಕೊಡಲಾಗಿದ್ದು, ಪ್ರಾರಂಭಿಕ ಕೆಲಸಗಳು ವಿವಿಧ ಹಂತದಲ್ಲಿದೆ.

ಚಾಮಲಾಪುರ ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕೇಂದ್ರೀಯ ವಿದ್ಯುತ್ ಪ್ರಾಧಿಕಾರದಿಂದ ಇನ್ ಪ್ರಿನ್ಸಿಪಲ್ ಕ್ಲಿಯರೆನ್ಸ್ ನೊರಕಿದೆ ಹಾಗೂ ಇತರೆ ಅನುಮೋದನೆಗಳನ್ನು ಪಡೆಯುವ ಬಗ್ಗೆ ಕಂಪನಿಯ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ರಾಜ್ಯದಲ್ಲಿ ಸಾರಾಯಿ ನಿಷೇಧ

705 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ನಿಷೇಧಿಸಲು ಸರ್ಕಾರದ ಬಯಸಿದೆಯೇ?

ಆ) ಹಾಗಿದ್ದಲ್ಲಿ ಈ ನಿಷೇಧದಿಂದ ಸರ್ಕಾರದ ಬೊಕ ಸಕೆ ಆಗುವ ನಷ್ಟವೆಷ್ಟು? ಈ ನಷ್ಟವನ್ನು ತುಂಬಲು ಸರ್ಕಾರ ಪರ್ಯಾಯ ಕಾರ್ಯಕ್ರಮ ಹೊಂದಿದೆಯೇ?

ಇ) ಈ ಮಾರಾಟ ನಿಷೇದದಿಂದ ನಿರುದ್ಯೋಗಿ ಗಳಾಗುವವರಿಗೆ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡುವುದೇ? ಹಾಗಿದ್ದಲ್ಲಿ ಅವುಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅದೇ

ಎ.ಇ.ಹೆಚ್. ಮೀಟರ್‌ಗಳ ಖರೀದಿಗೆ ಟೆಂಡರ್ ಕರೆದಿರುವುದು

711 - ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎ.ಇ.ಹೆಚ್. ಉಪಯೋಗಿಸುವವರಿಗೆ ಮೀಟರ್ ಅಳವಡಿಸಲು ರಾಜ್ಯ ಸರ್ಕಾರವು ಆದೇಶ ನೀಡಿದೆಯೇ.

ಆ) ಎ.ಇ.ಹೆಚ್. ಮೀಟರ್ ಯಾರಿಂದ ಖರೀದಿಯಾಗಿದೆ.

ಇ) ಮೀಟರ್‌ಗಳನ್ನು ಕೊಳ್ಳಲು ಸರ್ಕಾರವು ಟೆಂಡರ್ ಕರದಿತ್ತೇ.

ಈ) ಯಾರಿಂದ ಟೆಂಡರ್ ಬಂದಿತ್ತು? (ವಿವರವಾದ ಮಾಹಿತಿ ನೀಡುವುದು)

ಶ್ರೀ ಶರಣಪ್ಪಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಸಾಮಾನ್ಯ ನಿಯಮಾಗಿ, ಯಾವುದೇ ಎ.ಇ.ಹೆಚ್. ಸ್ಥಾವರಗಳಿಗೆ ಮೀಟರ್ ಅಳವಡಿಸದೇ ವಿದ್ಯುತ್ ಸಂಪರ್ಕವನ್ನು ನೀಡುವುದಿಲ್ಲ

ಆ) ಎ.ಇ.ಹೆಚ್. ಸ್ಥಾವರಗಳಿಗೆ ಅಳವಡಿಸಲಾಗುವ ಸಿಂಗಲ ಫೇಸ್ ಮೀಟರ್‌ಗಳನ್ನು ಕೆಳಕಂಡ ಸಂಸ್ಥೆಗಳಿಂದ ಖರೀದಿಸಲಾಗಿದೆ

1 ಮೆ : ಬಿ.ಹೆಚ್.ಇ.ಎಲ್. ಬೆಂಗಳೂರು.

2. ಮೆ : ವಿ. ಎಕ್ಸ್.ಎಲ್. ಲ್ಯಾಂಡೀಸ್ ಅಂಡ್ ಗೈರ್ ಲಿ. ವೆಸ್ಟ್ ಬೆಂಗಾಲ್.

3. ಮೆ : ಕ್ಯಾಪಿಟಲ್ ಮೀಟರ್ಸ್ ಲಿ., ಯು.ಪಿ.

4. ಮೆ : ಇ.ಸಿ.ಇ. ಇಂಡಸ್ಟ್ರೀಸ್ ಲಿ, ಹೈದರಬಾದ್

5. ಮೆ : ಇಂಡಿಯಾ ಮೀಟರ್ ಲಿ. ಮದ್ರಾಸ್

6. ಮೆ : ವಿಕಾಸ ಹೈಬ್ರೀಡ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ಲಿ. ಡೆಲ್ಲಿ.

7. ಮೆ : ಟವರ್ಸ ಅಂಡ ಟ್ರಾನ್ಸಫಾರ್ಮರ್ಸ ಲಿ., ಡೆಲ್ಲಿ.

8. ಮೆ : ಎಸ್.ಪಿ.ಸಿ. ಸೂಪರ್ ಮೀಟರ್ಸ್ ಲಿ. ಬೆಂಗಳೂರು.

9. ಮೆ : ಲಾರ್ಸನ್ ಅಂಡ್ ಟ್ಯೂಬ್ರೋಲೀ., ಮೈಸೂರು.

ಇ) ಜೂನ್ 96ರಲ್ಲಿ ಎ.ಇ.ಹೆಚ್. ಸ್ಥಾವರಗಳಲ್ಲಿ ಉಪಯೋಗಕ್ಕಾಗಿ 90,000 ಸಿಂಗಲ್ ಫೇಸ್ ಮೀಟರ್‌ಗಳನ್ನು ಖರೀದಿಸಲು ಮಂಡಳಿಯು ಟೆಂಡರುಗಳನ್ನು ಆಹ್ವಾನಿಸಲಾಗಿತ್ತು.

ಈ) ಈ ಕೆಳಕಂಡ 21 ಸಂಸ್ಥೆಗಳಿಗೆ ಟೆಂಡರ್ ಆಫರ್‌ಗಳು ಸ್ವೀಕೃತವಾಗಿತ್ತು.

1. ಅಕ್ಯೂರೇಟ್‌ಮೀಟರ್ ಪ್ರೈ.ಲಿ., ಡೆಲ್ಲಿ.

2. ಬೆಂಟೆಕ್ಸ್ ಎಲೆಕ್ಟ್ರಿಕಲ್ಸ್, ಡೆಲ್ಲಿ.

3. ಬೆಂಟೆಕ್ಸ್ ಎಲೆಕ್ಟ್ರಾನಿಕ್ಸ್,ಡೆಲ್ಲಿ.

4. ಬಿ.ಹೆಚ್.ಇ.ಎಲ್. ಬೆಂಗಳೂರು

5. ಕ್ಯಾಪಿಟಲ್ ಮೀಟರ್ಸ್ ಪ್ರೈ.ಲಿ.,ಯು.ಪಿ.

6. ಕ್ಯಾಪಿಟಲ್ ಪವರ್ ಸಿಸಟರ್ಸ್ ಪ್ರೈ.ಲಿ. ಯು.ಪಿ.
7. ಇ.ಸಿ.ಇ.ಇಂಡಸ್ಟ್ರೀಸ್ ಲಿ, ಹೈದರಾಬಾದ್
8. ಎಲಿಮರ್ ಎಲೆಕ್ಟ್ರಾನಿಕ್ಸ್, ಡೆಲ್ಲಿ.
9. ಜೆಇಸಿ ಅಲಸ್ಟೋಮ (ಇಂಡಿಯಾ) ಲಿ. ಕಲಕತ್ತಾ.
10. ಇಂಡಿಯಾ ಮೀಟರ್ಸ್ ಲಿ., ಮದ್ರಾಸ್
11. ಜೈಪುರ ಮೆಟಲ್ಸ್ ಅಂಡ್ ಎಲೆಕ್ಟ್ರಿಕಲ್ಸ್ ಲಿ., ಜೈಪುರ.
12. ಜನಿಕಾ ಎಲೆಕ್ಟ್ರಾನಿಕ್ಸ್ ಪ್ರೈ.ಲಿ. ಹೈದರಬಾದ್
13. ಮಾರ್ಡನ್ ಇನ್ಸ್ಟ್ರುಮೆಂಟ್ಸ್ ಪ್ರೈ.ಲಿ. ಡೆಲ್ಲಿ
14. ಸೀ ಹಾರ್ಸ್ ಇಂಡಸ್ಟ್ರೀಲಿ., ತಿರುಚಿ.
15. ಎಸ್‌ಪಿಸಿ ಸೂಪರ್ ಮೆಟಲ್ಸ್ ಪ್ರೈ ಲಿ. ಬೆಂಗಳೂರು.
16. ಇಂಟೋಟೆಕ್ಸ್ ಸ್ವೀಚ್‌ಗೇರ್ ಅಂಡ್ ಕಂಟ್ರೊಲ್ಸ್ ಯು.ಪಿ.
17. ಟವರ್ಸ್ ಅಂಡ್ ಟ್ರಾನ್ಸ್‌ಫಾರ್ಮರ್ಸ್ ಲಿ. ಡೆಲ್ಲಿ.
18. ಉಪಕಾರ ಮೀಟರ್ ಪ್ರೈ. ಲಿ. ಬೆಂಗಳೂರು.
19. ವಾಮ್ ಎಲೆಕ್ಟ್ರೋ ಡಿವೈಸಿಸ್ ಪ್ರೈ.ಲಿ.
20. ವಿಹೆಚ್‌ಇಲ್ ಇಂಡಸ್ಟ್ರೀಸ್ ಲಿ., ಡೆಲ್ಲಿ.
21. ವಿಎಕ್ಸ್‌ಎಲ್ ಲ್ಯಾಂಡೀಸ್ ಅಂಡ್ ಗೈರ್ ಲಿ., ವೆಸ್ಟ್ ಬೆಂಗಾಲ್.

ವಿದ್ಯುಚ್ಛಕ್ತಿ ಯೋಜನೆಗಳ ಪ್ರಗತಿ

716 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಪ್ರಮುಖ ವಿದ್ಯುಚ್ಛಕ್ತಿ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುವು ?

ಆ) ಈ ಯೋಜನೆಗಳಲ್ಲಿ ಉತ್ಪತ್ತಿಯಾಗಲಿರುವ ವಿದ್ಯುಚ್ಛಕ್ತಿ ಪ್ರಮಾಣವೆಷ್ಟು ?

ಇ) ವಿದ್ಯುಚ್ಛಕ್ತಿ ತಯಾರು ಮಾಡಲು ಯಾವುದಾದರೂ ಖಾಸಗಿ ವಿದೇಶಿ ಕಂಪನಿಗಳಿಗೆ ಸರ್ಕಾರ ಅನುಮತಿ ನೀಡಿದೆಯೇ ?

ಈ) ಅನುಮತಿ ನೀಡಿದ್ದರೆ ಸರ್ಕಾರದ ಷರತ್ತುಗಳೇನು ?